ಕರ್ನಾಟಕ ಸರ್ಕಾರ

Govt.of Karnataka

Office of the,Deputy Commissioner,Dharwad-580001 ಜಿಲ್ಲಾಧಿಕಾರಿಗಳ ಕಾರ್ಯಾಲಯ,ಧಾರವಾಡ-580001

ದೂರವಾಣಿ:0836-2233840,2233880,(ಫ್ಯಾಕ್ಸ್)0836-2747102, e-mail: deo.dharwad@gmail.com

ಕ್ರ: ಎಮ್.ಎಜಿ/ಶಾಸು/ವಹಿ/15/2021-22 ದಿನಾಂಕ: 26-05-2021

## ತಿದ್ದಪಡಿ ಆದೇಶ-1

ವಿಷಯ: ಧಾರವಾಡ ಜಿಲ್ಲೆಯಾದ್ಯಂತ ಕೋವಿಡ್-19 ತಡೆಗಟ್ಟುವ ಹಿನ್ನಲೆಯಲ್ಲಿ ಸಾರ್ವಜನಿಕರ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ **ದಿ:27-05-2021 ಬೆ:6-00 ಗಂಟೆಯಿಂದ ದಿ:29-05-2021ರ ಅ:12-00 ಗಂಟೆಯವರೆಗೆ** 3 ದಿನಗಳ ಕಾಲ ಮಾತ್ರ ಧಾರವಾಡ ಜಿಲ್ಲೆಯಾದ್ಯಂತ ಅವಶ್ಯಕ ಅಂಗಡಿಗಳನ್ನು ತೆರೆಯುವ ಕುರಿತು.

ಉಲ್ಲೇಖ: 1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ಇವರ ಪತ್ರ ಕ್ರ:ಆರ್.ಡಿ./158/ಟಿ.ಎನ್.ಆರ್/2020 ದಿನಾಂಕ:21-05-2021

2) ಈ ಕಾಯಾಲಯದ ಆದೇಶ ದಿ:23-05-2021

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ ಧಾರವಾಡ ಜಿಲ್ಲೆಯಾದ್ಯಂತ ಕೋವಿಡ್-19 ಸೋಂಕು ಹರಡದಂತೆ ಪರಿಣಾಮಕಾರಿಯಾದ ಅನುಸರಣಾ ಕ್ರಮ ಜರುಗಿಸುವದಕ್ಕೆ ಸಂಬಂಧಿಸಿ, ಸಾರ್ವಜನಿಕರ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಮುಂಜಾಗೃತಾ ಕ್ರಮವಾಗಿ ಧಾರವಾಡ ಜಿಲ್ಲೆಯಾದ್ಯಂತ ದಿ:24-05-2021 ಬೆ:6-00 ಗಂಟೆಯಿಂದ ದಿನಾಂಕ:07-06-2021ರ ಬೆ:6-00 ಗಂಟೆಯವರೆಗೆ ಅನುಬಂಧ-1ರಲ್ಲಿ ಒಳಗೊಂಡ ಮಾರ್ಗಸೂಚಿಯನ್ವಯ ಲಾಕ್‌ಡೌನ್ ಮಾಡಿ ಈಗಾಗಲೇ ಉಲ್ಲೇಖ-2ರನ್ವಯ ಆದೇಶಿಸಿದ್ದು ಇರುತ್ತದೆ.

ಧಾರವಾಡ ಜಿಲ್ಲೆಯಲ್ಲಿ ಕಿರಾಣಿ ಹಾಗೂ ಮಾಂಸ ಮಾರಾಟದ ಅವಧಿಯನ್ನು ವಿಸ್ತರಿಸುವುದು ಅವಶ್ಯವಿರುವುದರಿಂದ, ಜನರು ಏಕಕಾಲಕ್ಕೆ ಅಂಗಡಿಗಳ ಮುಂದೆ ಜನಸಂದಣಿ ಉಂಟು ಮಾಡದೇ ಪ್ರತ್ಯೇಕವಾಗಿ ಬಂದು ಕೋವಿಡ್ ಸುರಕ್ಷತಾ ಕ್ರಮಗಳೊಂದಿಗೆ ಕಿರಾಣಿ, ಮಾಂಸದ ಪದಾರ್ಥಗಳನ್ನು ಖರೀದಿಸಬೇಕು ಹಾಗೂ ಹೆಚ್ಚು ಜನದಟ್ಟಣೆಯಾಗಬಾರದು ಎಂಬ ಉದ್ದೇಶದಿಂದ ಈಗಾಗಲೇ ಉಲ್ಲೇಖ-2ರ ಈ ಕಾರ್ಯಾಲಯದ ಆದೇಶದನ್ವಯ ಕೆಲವೊಂದು ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಆದೇಶಿಸಲಾಗಿದೆ. ಅದರ ಜೊತೆಗೆ ಈ ಕೆಳಗೆ ಹೇಳಿದ ಅಂಶಗಳನ್ನು ಸಹ ತಪ್ಪದೇ ಪಾಲಿಸಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

1) ಧಾರವಾಡ ಜಿಲ್ಲೆಯಾದ್ಯಂತ ದಿ:27-05-2021 ರಿಂದ ದಿ:29-05-2021ರ ವರೆಗೆ ಕೇವಲ 3 ದಿನ ಮಾತ್ರ ಬೆ:-6-00 ಗಂಟೆಯಿಂದ ಅ:12-00 ಗಂಟೆಯವರೆಗೆ ಕಿರಾಣಿ ಹಾಗೂ ಮಾಂಸ ಪದಾರ್ಥಗಳ ಅಂಗಡಿಗಳನ್ನು ತೆರೆದು ಕೋವಿಡ್ ಸುರಕ್ಷತಾ ಕ್ರಮಗಳೊಂದಿಗೆ ಅವಶ್ಯಕ ಸಾಮಾಗ್ರಿಗಳನ್ನು ಖರೀದಿಸಲು ಅವಕಾಶವಿರುತ್ತದೆ.

2) ಈ ಮೂರು ದಿನಗಳ ಅವಕಾಶದ ನಂತರ ಕಠಿಣ ಲಾಕ್‌ಡೌನ್ ಅವಧಿ ಪೂರ್ಣಗೊಂಡ ಬಳಿಕ ಜೂನ್ 7 ರ ನಂತರವೇ ಈ ವಸ್ತುಗಳು ದೊರೆಯಲಿವೆ.

3) ತರಕಾರಿ ಮತ್ತು ಹಾಲು ಮಾರಾಟಕ್ಕೆ ಪ್ರತಿದಿನ ಬೆ:-6-00 ಗಂಟೆಯಿಂದ ಬೆ:8-00 ಗಂಟೆಯವರೆಗೆ ಅವಕಾಶವಿರುವುದರಿಂದ ಇವುಗಳ ಪೂರೈಕೆ ಎಂದಿನಂತೆಯೇ ಇರುತ್ತದೆ.

4) ಪ್ರತಿದಿನ ಇಂದಿರಾ ಕ್ಯಾಂಟಿನ್‌ಗಳಿಗೆ ಎಂದಿನಂತೆ ಪಾರ್ಸಲ್ ವ್ಯವಸ್ಥೆ ಕಲ್ಪಿಸಲಾಗಿದೆ.

5) ಸಾರ್ವಜನಿಕ ವಿತರಣಾ ಕೇಂದ್ರ ( ರೇಷನ್ ಅಂಗಡಿ) ಪ್ರತಿದಿನ ಬೆ:-6-00 ಗಂಟೆಯಿಂದ ಅ:12-00 ಗಂಟೆಯವರೆಗೆ ತೆರೆದು ಕೋವಿಡ್ ಸುರಕ್ಷತಾ ಕ್ರಮಗಳೊಂದಿಗೆ ಅವಶ್ಯಕ ಸಾಮಾಗ್ರಿಗಳನ್ನು ವಿತರಿಸಲು ಅವಕಾಶವಿರುತ್ತದೆ.

Patil NK

ಜಿಲ್ಲಾಧಿಕಾರಿಗಳು
ಧಾರವಾಡ ಜಿಲ್ಲೆ, ಧಾರವಾಡ

ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ, ಧಾರವಾಡ
ಡಿಸ್ಟ್ರಿಕ್ಟ ಧಾರವಾಡ
DISTRICT MAGISTRATE DHARWAD
DISTRICT DHARWAD

ಪ್ರತಿಗಳು:

1. ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಅಭಿನಂದನೆಗಳೊಂದಿಗೆ ಕಳುಹಿಸಿದೆ.
2. ಆರಕ್ಷಕ ಅಧೀಕ್ಷಕರು, ಧಾರವಾಡ ಜಿಲ್ಲೆ, ಧಾರವಾಡ ಇವರಿಗೆ ಮಾಹಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಅಭಿನಂದನೆಗಳೊಂದಿಗೆ ಕಳುಹಿಸಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಅಭಿನಂದನೆಗಳೊಂದಿಗೆ ಕಳುಹಿಸಿದೆ.
4. ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ಉಪವಿಭಾಗಾಧಿಕಾರಿಗಳು, ಧಾರವಾಡ ಇವರಿಗೆ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

ಜಿಲ್ಲೆಯ ಎಲ್ಲ ತಹಶೀಲದಾರರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

ಅಪರ ಜಿಲ್ಲಾಧಿಕಾರಿಗಳು
ಧಾರವಾಡ ಜಿಲ್ಲೆ, ಧಾರವಾಡ